**CC 2986/2022**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**<u>ಸಿಸಿ ನಂಬರ್ 2986/2022</u>**

**ಸಿ ಡಬ್ಲ್ಯೂ -5**

**ಪಿ ಡಬ್ಲ್ಯೂ -5**

| | |
|---|---|
| **ಸಾಕ್ಷಿಯ ಹೆಸರು -** | **ಜಯಂತ್ ಕುಮಾರ್** |
| **ತಂದೆಯ ಹೆಸರು -** | **ನಾಗೇಶ್** |
| **ವಯಸ್ಸು -** | **27 ವರ್ಷಗಳು** |
| **ಉದ್ಯೋಗ -** | **ಬಡಗಿತನ** |
| **ವಾಸಸ್ಥಳ -** | **ನಾಗಮಂಗಲ, ಮಂಡ್ಯ** |

**<u>ಸಾಕ್ಷಿಯನ್ನು ದಿನಾಂಕಃ 07-03-2026 ರಂದು ಪ್ರಾಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ</u>**

ನಾನು ಈ ಹಿಂದೆ ಎಐಪಿಆರ್ ಕಂಪನಿಯಲ್ಲಿ ತನಿಖಾಧಿಕಾರಿ ಎಂದು **2019** ರಿಂದ **2023** ರವರೆಗೆ ಕೆಲಸ ಮಾಡಿರುತ್ತೇನೆ.

ದಿಃ **20-04-2022** ರಂದು ನಮ್ಮ ಟೀಂ ಮ್ಯಾನೆಜರ್ ಚಾಸಾ **-6** ಮತ್ತು ಇ.ಆರ್.ಡಿ ಕಂಪನಿಯ ನುರಿತ ತಜ್ಞ ಚಾಸಾ **-4** ರವರು ಚಾಸಾ **-1** ರವರೊಂದಿಗೆ ನನ್ನನ್ನು ಕರೆದುಕೊಂಡು ಹೊಸಪೇಟೆಗೆ ಬಂದಿದ್ದರು. ನಮಗೆ ಹೊಸಪೇಟೆಯ ರಾಣಿಪೇಟೆ ರಸ್ತೆಯಲ್ಲಿ ಅಂಗಡಿಯೊಂದರಲ್ಲಿ ಇ.ಆರ್.ಡಿ ಕಂಪನಿಯ ಚಾರ್ಜರ್ ಗಳನ್ನು, ಸಿ ಟೈಪ್ ಕೇಬಲ್ ಗಳು, ಫೋರ್ ವಿ ಕೇಬಲ್ ಗಳನ್ನು ನಕಲಿ ಮಾಡಿ ಮಾರಾಟ ಮಾಡಲಾಗುತ್ತಿದೆ ಎಂದು ಮಾಹಿತಿ ಬಂದಿತ್ತು. ನಾವು ಸರ್ವೆ ಮಾಡುತ್ತಿದ್ದಾಗ ಆಶಾಪುರ ಮೊಬೈಲ್ ಸರ್ವಿಸ್ ಸೆಂಟರ್ ಅಂಗಡಿಯಲ್ಲಿ **13** ಬಾಕ್ಸ ಇ. ಆರ್. ಡಿ ಕಂಪನಿಯ ನಕಲಿ ಉತ್ಪನ್ನಗಳು ಇದ್ದದ್ದು ಕಂಡು ಬಂದಿತು. ಆ ದಿನ ರಾತ್ರಿ **8.30** ಆಗಿದ್ದರಿಂದ ಪೋಲಿಸರಿಗೆ ಮಾಹಿತಿ ನೀಡಿ ಸದರಿ ಅಂಗಡಿಗೆ ಹೋಗಲು ಆಗಿರಲಿಲ್ಲ. ಪೋಲಿಸು ಮರುದಿನ ಬೆಳಿಗ್ಗೆ ಬರುವಂತೆ ತಿಳಿಸಿದ್ದರು.

ದಿಃ **21-04-2022** ರಂದು ಬೆಳಿಗ್ಗೆ **11.00** ಗಂಟೆಗೆ ಪೋಲಿಸರೊಂದಿಗೆ ನಾವು, ಚಾಸಾ-**1**, **4** ಮತ್ತು **6** ರವರು ಹೋಗಿದ್ದೇವು. ಸದರಿ ಅಂಗಡಿಯಲ್ಲಿ ಇಬ್ಬರು ಕೆಲಸ ಮಾಡುವ ಹುಡುಗರು ಇದ್ದರು. ಪೋಲಿಸು ಅವರನ್ನು ವಿಚಾರಿಸಿದಾಗ ಮನ್ವಿರ್ ಸಿಂಗ್, ಕುಲ್‌ದೀಪ್ ಸಿಂಗ್ ಎಂದು ತಿಳಿಸಿದರು. ಸದರಿ ಅಂಗಡಿಯ ಮಾಲೀಕ ಮನೋಹರ್ ಸಿಂಗ್ ರವರು ಕೆಲಸ ಮೇಲೆ ಹೊರಗೆ ಹೋಗಿರುತ್ತಾರೆ ಎಂದು ಆ ಹುಡುಗರು ತಿಳಿಸಿದರು. ಸದರಿ ಅಂಗಡಿಯಲ್ಲಿದ್ದ ಇ.ಆರ್.ಡಿ ಕಂಪನಿಯ ನಕಲಿ ಉತ್ಪನ್ನಗಳನ್ನು ಪೋಲಿಸರು ಪಂಚರ ಸಮಕ್ಷಮ ಜಪ್ತು ಪಡಿಸಿಕೊಂಡು ಠಾಣೆಗೆ ತೆಗೆದುಕೊಂಡು ಹೋದರು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ</u>**

ಆರೋಪಿತರು ಸದರಿ ಉತ್ಪನ್ನಗಳನ್ನು ಅನಂತಪುರದ ಕಮಲ್ ದೇವ್ ಟೆಲಿಕಾಂ ಹೋಲ್ ಸೇಲ್ ಶಾಪ್ ನ ಮೂಲ್ ಸಿಂಗ್ ತಂದೆ ಲಕ್ ಸಿಂಗ್ ಮತ್ತು ಗಣಪತ್ ಸಿಂಗ್ ತಂದೆ ದುರ್ಗಾ ಸಿಂಗ್ ರವರಿಂದ ಖರೀದಿಸಿರುವುದಾಗಿ ತಿಳಿಸಿದ್ದರು ಅಂದರೆ ನನಗೆ ಗೊತ್ತಿಲ್ಲ. ಸದರಿ ಆರೋಪಿತರೊಂದಿಗೆ ನ್ಯಾಯಾಲಯದ ಮುಂದೆ ಇರುವ ಆರೋಪಿ ಇ.ಆರ್.ಡಿ ಕಂಪನಿಯ ನಕಲಿ ಉತ್ಪನ್ನಗಳನ್ನು ಮಾರಾಟ ಮಾಡಿ ಇ.ಆರ್.ಡಿ ಕಂಪನಿಯವರಿಗೆ ಮೋಸ ಮಾಡಿರುತ್ತಾರೆ ಅಂದರೆ ಸರಿ. ಈ ಬಗ್ಗೆ ನಾನು ಹೇಳಿಕೆ ನೀಡಿರುತ್ತೇನೆ ಅಂದರೆ ಸರಿ.

## ಪಾಟೀ ಸವಾಲು ಆರೋಪಿ ಪರ ಶ್ರೀ ಎನ್ ಎಸ್ ಎಚ್ ವಕೀಲರಿಂದಃ

ನಾನು ತನಿಖಾಧಿಕಾರಿ ಎಂದು ಕೆಲಸ ಮಾಡಲು ಅರ್ಹತೆ ಪಡೆದಿರುತ್ತೇನೆ ಎಂದು ತೋರಿಸಲು ಪೋಲಿಸರಿಗೆ ದಾಖಲೆ ನೀಡಿರುತ್ತೇನೆ. ಚಾಸಾ -1 ರವರು ದೂರು ನೀಡಿದ್ದರು.

ಹೊಸಪೇಟೆಯಲ್ಲಿ ನಕಲಿ ಉತ್ಪನ್ನಗಳ ಮಾರಾಟ ಆಗುತ್ತಿದೆ ಎಂದು ಯಾರು ಮಾಹಿತಿ ನೀಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಆ ದಿನ ನಾವು ಹೊಸಪೇಟೆಯಲ್ಲಿ 7-8 ಅಂಗಡಿಗಳಲ್ಲಿ ಸರ್ವೆ ಮಾಡಿರುತ್ತೇವೆ. 7-8 ಅಂಗಡಿಗಳ ಹೆಸರುಗಳನ್ನು ನನ್ನ ಹೇಳಿಕೆಯಲ್ಲಿ ಬರೆಸಿಲ್ಲ. ಅಂಗಡಿ ಮಾಲೀಕರಿಗೆ ನಾವುಗಳು ಉತ್ಪನ್ನಗಳನ್ನು ಪರೀಶೀಲಿಸುತ್ತೇವೆ ಎಂದು ಮತ್ತು ಸದರಿ ಪರಿಶೀಲನೆಗೆ ಅವಕಾಶ ಮಾಡಿಕೊಡಿ ಎಂದು ನೋಟಿಸ್ ನೀಡಿರಲಿಲ್ಲ. ಪಂಚರನ್ನು ಪೋಲಿಸರೆ ಕರೆದುಕೊಂಡು ಬಂದಿರುತ್ತಾರೆ, ಅವರು ಎಲ್ಲಿಂದ ಬಂದರು ಎಂದು ನನಗೆ ಗೊತ್ತಿಲ್ಲ. ಅಂಗಡಿಯಲ್ಲಿ ಬಿಲ್‌ಗಳನ್ನು ಚೆಕ್ ಮಾಡಿರುತ್ತೇವೆ. ಸದರಿ ಬಿಲ್‌ಗಳನ್ನು ಪೋಲಿಸರು ವಶಪಡಿಸಿಕೊಂಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಉತ್ಪನ್ನಗಳು ಅಸಲಿಯೋ ನಕಲಿಯೋ ಎಂದು ಗುರುತಿಸಲು ಯಂತ್ರಗಳ ಅವಶ್ಯಕತೆ ಇರುವುದಿಲ್ಲ. ದೂರು ನೀಡುವುದಕ್ಕೂ ಮೊದಲು ಅಸಲಿ ಮತ್ತು ನಕಲಿ ಉತ್ಪನ್ನಗಳನ್ನು ತಾಳೆ ಮಾಡಿ ನೋಡಲಾಗಿತ್ತು.

ಅಸಲಿ ಉತ್ಪನ್ನ ಮತ್ತು ನಕಲಿ ಉತ್ಪನ್ನಗಳನ್ನು ಗುರುತಿಸಿ ಪ್ರಮಾಣ ಪತ್ರವನ್ನು ನೀಡಿರುತ್ತೇವೆ. ವಶಪಡಿಸಿಕೊಂಡಿದ್ದ ಬಾಕ್ಸ್‌ಗಳ ಮೇಲೆ ಕ್ರಮ ಸಂಖ್ಯೆಗಳನ್ನು ಹಾಕಲಾಗಿತ್ತು. ನನ್ನ ಹೇಳಿಕೆಯಲ್ಲಿ ಯಾವ ಉತ್ಪನ್ನಗಳಿರುವ ಬಾಕ್ಸ ಮೇಲೆ ಯಾವ ಸಂಖ್ಯೆ ಬರಯಲಾಗಿದೆ ಎಂದು ಬರೆದಿರುವುದಿಲ್ಲ. ನನ್ನ ಹೇಳಿಕೆಯಲ್ಲಿ ಇ.ಆರ್.ಡಿ ಕಂಪನಿಯ ಉತ್ಪನ್ನಗಳ ಸಿರಿಯಲ್ ಸಂಖ್ಯೆ ಯಾವ ರೀತಿ

ಇರುತ್ತದೆ ಮತ್ತು ನಕಲಿ ಉತ್ಪನ್ನಗಳ ಮೇಲೆ ಇರುವ ಸಂಖ್ಯೆ ಎನು ಇರುತ್ತದೆ ಎಂದು ಬರೆಸಿರುವುದಿಲ್ಲ. ಹೇಳಿಕೆಯನ್ನು ಠಾಣೆಯಲ್ಲಿಯೇ ಬರೆದುಕೊಂಡಿರುತ್ತಾರೆ. ಸದರಿ ಹೇಳಿಕೆಯನ್ನು ಠಾಣಾ ಬರಹಗಾರರೇ ಬರೆದುಕೊಂಡಿರುತ್ತಾರೆ. ಮಲ್ಲೇಶಪ್ಪ ಹೇಳಿಕೆ ಬರೆದುಕೊಂಡಿರುತ್ತಾರೆ. ಯಾವ ಕಂಪ್ಯೂಟರ್ ನಲ್ಲಿ ಹೇಳಿಕೆ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ, ನನ್ನ ಸಮಕ್ಷಮ ಯಾವುದೇ ಉತ್ಪನ್ನಗಳನ್ನು ಜಪ್ತು ಪಡಿಸಿಕೊಂಡಿಲ್ಲ ಮತ್ತು ಪಂಚನಾಮೆ ಮಾಡಿಲ್ಲ ಅಂದರೆ ಸರಿಯಲ್ಲ. ಆರೋಪಿ ನಕಲಿ ಉತ್ಪನ್ನಗಳನ್ನು ಮಾರಾಟ ಮಾಡುತ್ತಿರಲಿಲ್ಲ, ಆತನ ಸಂಬಂಧಪಟ್ಟ ಕಂಪನಿಯಿಂದ ಉತ್ಪನ್ನಗಳನ್ನು ಖರೀದಿಸಿ ಮಾರಾಟ ಮಾಡುತ್ತಿದ್ದ ಅಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.